ಕೊಡುವಾಗ ಎಲ್ಲಾ ಸಬ್ಸಿಡಿ ಹಣವನ್ನು ಕೊಟ್ಟಿದ್ದೇವೆ ಎಂದು ಬಂದಿದೆ. ಇಲ್ಲಿ ಪ್ರಶ್ನೆ ಕೇಳಿದಾಗ ೨೬ ಲಕ್ಷ ಕೊಟ್ಟಿದ್ದೇವೆ ಎಂದು ಹೇಳಿದಿರಿ. ಆದುದರಿಂದ ಕೇಂದ್ರ ಸರ್ಕಾರದಿಂದ ಬಂದ ಸಬ್ಸಿಡಿಯನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡಿದ್ದೀರಾ ?

ಶ್ರೀ ಬಿ. ಎಲ್. ಗೌಡ.— ಹೊಗೆಸೊಪ್ಪಿನ ಬ್ಯಾರನ್ ಕಟ್ಟಲಿಕ್ಕೆ ಸಬ್ಸಿಡಿಯರಿ ಯೋಜನೆಯನ್ವಯ ೧೯೭೬-೭೭ ರಿಂದ ೧೯೭೮-೭೯ರವರೆಗೆ ಕೇಂದ್ರಸರ್ಕಾರದವರು ಸಬ್ಸಿಡಿ ಕೊಡುತ್ತಿದ್ದರು. ಕೇಂದ್ರ ಸರ್ಕಾರದವರು ಕೊಟ್ಟ ಸಬ್ಸಿಡಿಯನ್ನು ರಾಜ್ಯಸರ್ಕಾರ ಬ್ಯಾನರ್‌ಗಳಿಗೆ ಕೊಡಲಿಕ್ಕೆ ಉಪಯೋಗ ಮಾಡಿದೆ. ೧೯೭೭-೭೮ ರಲ್ಲಿ ೩೨,೦೬, ೨೫೦-೦೦ ರೂಪಾಯಿಗಳನ್ನು ಮತ್ತು ೧೯೭೮-೭೯ ರಲ್ಲಿ ೨೬, ೩೭, ೭೫೦-೦೦ ರೂಪಾಯಿಗಳನ್ನು ಕೇಂದ್ರಸರ್ಕಾರದವರು ಕೊಟ್ಟಿದ್ದಾರೆ. ಇದರಲ್ಲಿ ರಾಜ್ಯಸರ್ಕಾರ ಒಂದು ಕಾಸನ್ನೂ ಇಟ್ಟು ಕೊಂಡಿಲ್ಲ, ಈ ಹಣವನ್ನು ರಾಜ್ಯಸರ್ಕಾರದವರು ಕೊಡುತ್ತಾ ಬಂದಿದ್ದಾರೆ. ಹೊಸದಾಗಿ ೬ ಸಾವಿರ ಜನ ಬ್ಯಾರನ್ ಕಟ್ಟಿದರು ಅವರಿಗೆ ನಾವು ಕೊಡುತ್ತೇವೆಂದು ಆಶ್ಯೂರೆನ್ಸ್ ಕೊಟ್ಟಿರಲಿಲ್ಲ. ಬಡ್ಜೆಟ್‌ನಲ್ಲಿದ್ದ ಪರಿಗೆ ಮಾತ್ರ ಕೊಟ್ಟಿದ್ದೇವೆ. ಈ ಯೋಜನೆಯನ್ನು ೧೯೭೯-೮೦ರಲ್ಲಿ ಡಿಸ್‌ಕಂಟಿನ್ಯೂ ಮಾಡಿದೆ.

ಶ್ರೀ ಕೆ. ಎಸ್. ಕಾಳಮರಿಗೌಡ.—೧೯೭೭-೭೮ ಮತ್ತು ೧೯೭೮-೭೯ ರಲ್ಲಿ ಕೇಂದ್ರಸರ್ಕಾರದವರು ಏನು ಸಬ್ಸಿಡಿ ಹಣ ಕೊಟ್ಟಿದ್ದಾರೆ ಆ ಹಣ ಸಂಪೂರ್ಣವಾಗಿ ರೈತರಿಗೆ ತಲುಪಿಲ್ಲ. ೧೯೭೭-೭೮ ಮತ್ತು ೧೯೭೮-೭೯ ರಲ್ಲಿ ಬ್ಯಾನರ್ ಕಟ್ಟಿದವರ ಬಗ್ಗೆ ನಾನು ಕೇಳುತ್ತಾ ಇದ್ದೇನೆ. ಅವರಿಗೆ ಸಬ್ಸಿಡಿ ಹಣ ಕೊಟ್ಟಿಲ್ಲ, ಬೇಕಾದರೆ ನಿದರ್ಶನ ಕೊಡುತ್ತೇನೆ. ಸೂಕ್ತ ತಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಎಲ್. ಗೌಡ.—ನಾನು ಈಗಾಗಲೇ ತಿಳಿಸಿದ ಹಾಗೆ ೧೯೭೭-೭೮ ಮತ್ತು ೧೯೭೮-೭೯ರಲ್ಲಿ ಏನು ಸಬ್ಸಿಡಿ ಬಂದಿದೆ ಅದನ್ನು ಪೂರ್ತಿಯಾಗಿ ಪಾವತಿ ಮಾಡಿದ್ದೇವೆ. ಯಾರಿಗಾದರೂ ಕೊಡದೇ ಇದ್ದರೆ, ಮಾನ್ಯ ಸದಸ್ಯರು ಅದನ್ನು ನನ್ನ ಗಮನಕ್ಕೆ ತಂದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಎಸ್. ಕಾಳಮರಿಗೌಡ.—ಒಂದೆರಡು ಉದಾಹರಣೆಗಳಲ್ಲ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಎಷ್ಟು ಬರಬೇಕಾಗಿದೆ ಎಂಬ ಬಗ್ಗೆ ಪತ್ರ ಬರೆಯಿರಿ ಸಂಪೂರ್ಣ ವರದಿ ತರಿಸಿಕೊಳ್ಳಿ, ಕೇಂದ್ರ ಸರ್ಕಾರದವರಿಗೂ ಇಷ್ಟು ಹಣ ಬರಬೇಕಾಗಿದೆ ಎಂದು ಪತ್ರ ಬರೆದು ಉತ್ತರವನ್ನು ತರಿಸಿಕೊಂಡ ನಂತರವಾದರೂ ಕೊಡುತ್ತೇವೆ ಎನ್ನುವ ಭರವಸೆಯನ್ನು ತಾವು ಕೊಡಬೇಕು.

ಶ್ರೀ ಬಿ. ಎಲ್. ಗೌಡ.—ಇಲಾಖೆಯಿಂದ ವರದಿ ತರಿಸಿದ್ದೇವೆ ; ಚರ್ಚೆ ಮಾಡಿದ್ದೇವೆ. ನನಗೆ ಬಂದಿರತಕ್ಕ ಮಾಹಿತಿ ಪ್ರಕಾರ ಕೇಂದ್ರಸರ್ಕಾರದಿಂದ ಬಂದಿರತಕ್ಕ ಹಣದಲ್ಲಿ ಯಾವ ಒಂದು ಕಾಸನ್ನೂ ರಾಜ್ಯಸರ್ಕಾರದವರು ಇಟ್ಟುಕೊಂಡಿಲ್ಲ. ನಮ್ಮ ಸ್ನೇಹಿತರು ಯಾರಿಗಾದರೂ ಕೊಟ್ಟಿಲ್ಲ ಅಂದರೆ ವಿಚಾರಣೆಮಾಡಿ ಕೊಡುವ ಪ್ರಯತ್ನ ಮಾಡುತ್ತೇನೆ.

ಪ್ರಶ್ನೆ ೭೧

ಶ್ರೀ ಅಬ್ದುಲ್ ಸಜೀರ್‌ಸಾಬ್.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ನನ್ನ ಹೆಸರು ತಪ್ಪಾಗಿಬಿದ್ದಿದೆ. ಇದು ಮಾನ್ಯ ಸಹಕಾರ ಸಚಿವರಿಗೆ ಸಂಬಂಧಪಟ್ಟಿದ್ದು, ಅವರು ಈ ಪ್ರಶ್ನೆಗೆ ಉತ್ತರ ಕೊಡಬೇಕು ಎಂದು ಬರೆದಿದ್ದೇನೆ.

ಅಧ್ಯಕ್ಷರು.—ಈ ಪ್ರಶ್ನೆಗೆ ಸಹಕಾರ ಮಂತ್ರಿಗಳು ಉತ್ತರಕೊಡಬೇಕು ಎಂದು ಬರೆದಿದ್ದಿನೆ. ಇದನ್ನು ನಾನು ನೋಡಿಸುತ್ತೇನೆ.

ಚಾಮರಾಜೇಂದ್ರ ಕಲಾ ಶಾಲೆ ಮೈಸೂರು

೧೧೦. ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರಿನಲ್ಲಿರುವ ಚಾಮರಾಜೇಂದ್ರ ಕಲಾ ಶಾಲೆಯನ್ನು ಪ್ರಥಮ ದರ್ಜೆಯ ಶಾಲೆಯಾಗಿ ಪರಿವರ್ತಿಸಲು ಸರ್ಕಾರ ನಿರ್ಧಾರ ತೆಗೆದುಕೊಂಡಿದ್ದರ ಬಗ್ಗೆ, ಯೋಜನೆಯನ್ನೇನಾದರೂ ರೂಪಿಸಲಾಗಿದೆಯೇ ?

ಅ) ಹಾಗಿದ್ದಲ್ಲಿ ಯೋಜನೆಯು ಮಚ್ಚಲೆಷ್ಟು ? ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿದೆ.

ಇ) ಈ ಯೋಜನೆಯು ರೂಪರೇಷೆಗಳೇನು

ಶ್ರೀ ಬಿ. ರಾಚಯ್ಯ ದಾನ್ಯ ಶಿಕ್ಷಣ ಮಂತ್ರಿಗಳು.—

ಅ) ಚಿತ್ರಾಂರಾಜೇಂದ್ರ ಕಲಾ ಶಾಲೆಯ ಆವರಣದಲ್ಲಿ ಚಿತ್ರಾಂರಾಜೇಂದ್ರ ದೃಶ್ಯ ಕಲಾ ಅಡಮಿಯು ಸ್ಥಾಪನೆಯಾಗಿದೆ. ಇದರ ಪೂರ್ಣಾಳ ಇನ್ನೂ ತಯಾರಾಗುತ್ತಿದೆ.

ಆ) ೧೯೮೨-೮೩ರಲ್ಲಿ ೮.೦೦ ಲಕ್ಷ ರೂಗಳು ೧೯೮೩-೮೪ರಲ್ಲಿ ೫.೦೦ ಲಕ್ಷರೂಗಳು ಮಚ್ಚಿಪಾಗುವ ಅಂದಾಜಿದೆ.

ಇ) ಶಾಂತಿನಿಕೇತನ ಮತ್ತು ಮುಂಬಯಿ ಜೆ. ಜೆ. ಕಲಾಶಾಲೆಯ ಮಾದರಿಯ ಸಂಸ್ಥೆ ಸ್ಥಾಪಿಸಿ, ದೃಶ್ಯ ಕಲೆಯಲ್ಲಿ ಉನ್ನತ ಮಟ್ಟದ ಪದವಿ ಶಿಕ್ಷಣ ನೀಡುವುದು ಉದ್ದೇಶ ಪೂರ್ಣವಾಗಿ ರೂಪಗೊಂಡಾಗ ವರ್ಣಚಿತ್ರ ಕಲೆ ಮಾಧ್ಯಮ ಶಿಲ್ಪ, ರೇಖಾಚಿತ್ರ ಕಲೆ ಮತ್ತು ರಸಶಾಸ್ತ್ರ, ಚರಿತ್ರೆ, ಲೋಹಕಲೆ, ಒಳಭಾಗದ ವಿನ್ಯಾಸ, ಪಾಣ್ಣಿ ನುತ್ತು ಕುಂಭಕಲೆ, ಬಟ್ಟೆಗಳ ವಿನ್ಯಾಸ ಛಾಯಾ ಚಿತ್ರ ಗ್ರಹಣ, ಜಾಹೀರಾತಿಗೆ ಚಲನಚಿತ್ರ ಮಾಡುವುದು ಇವೇ ಮುಂತಾದವುಗಳಲ್ಲಿ ಉನ್ನತ ಶಿಕ್ಷಣ ಸಾಧ್ಯವಾಗುವುದು.

ಶ್ರೀ ಹೆಚ್. ಗಂಗಾಧರನ್.—ಅಕಾಡಮಿ ಅಂದರೆ ಅದಕ್ಕೆ ಏನಾದರೂ ಪ್ರತ್ಯೇಕವಾದಂಥ ಎಕ್ಸ್‌ಪರ್ಟ್‌ಸ್ಸನ್ನು ಅಧ್ಯಕ್ಷರನ್ನಾಗಿ ಮಾಡುತ್ತೀರಾ ? ಅದಕ್ಕೆ ಏನಾದರೂ ಒಂದು ಕಮಿಟಿ ಫಾರಂ ಮಾಡಿದ್ದೀರಾ? ಈ ಸಂಸ್ಥೆ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಲ್ಲಿದೆ, ಇದನ್ನು ಪ್ರತ್ಯೇಕವಾಗಿ ಎಜುಕೇಷನ್ ಡಿಪಾರ್ಟ್‌ಮೆಂಟ್‌ಗೆ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಇದಕ್ಕೆ ಪೂರ್ವ ಮುಖ್ಯ ಮಂತ್ರಿಗಳ ಅಧ್ಯಕ್ಷರಾಗಿದ್ದಾರೆ. ಪೂರ್ವ ಕೈಷಡ ಮುಖ್ಯ ಸಂಸ್ಕೃತಿ ಇಲಾಖೆಯ ಮಂತ್ರಿಗಳು ಉಪಾಧ್ಯಕ್ಷರಾಗಿದ್ದಾರೆ. ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರು, ಪ್ರೊಫೆಸರ್ ರೋರಿಕ್, ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳು, ಲಲಿತಕಲಾ ಅಕಾಡೆಮಿಯ ಅಧ್ಯಕ್ಷರು, ಕಾಲೇಜು ಶಿಕ್ಷಣ ನಿರ್ದೇಶಕರು ಸದಸ್ಯರಾಗಿದ್ದಾರೆ.

ಶ್ರೀ ಹೆಚ್. ಗಂಗಾಧರನ್.—೧೯೮೨-೮೩ರಲ್ಲಿ ೮ ಲಕ್ಷರೂಪಾಯಿಗಳು ಖರ್ಚಾಗಿದೆ ಎಂದು ಹೇಳಿದ್ದೀರಿ. ಇದಕ್ಕೆ ವಿದೇಶಿಯಾಗಿ ನೇಮಕಾತಿಗಳನ್ನು ಏನಾದರೂ ಮಾಡಿದ್ದೀರಾ, ನೇಮಕಾತಿ ಸಮಾವೇಶಗಳನ್ನು ಏನು ಮಾಡಿದ್ದೀರಿ, ಎಷ್ಟು ಲೆಕ್ಚರರ್ಸ್, ಪ್ರೊಫೆಸರ್‌ಸನ್ನು ಅಪಾಯಿಂಟ್ ಮಾಡಿದ್ದೀರಿ. ೮ ಲಕ್ಷ ಖರ್ಚು ಮಾಡಿರುವುದಕ್ಕೆ ಏನಾದರೂ ಲೆಕ್ಕ ಇದೆಯೇ ?

SRI. B. RACHAIAH.—The post of Dean was filled up. Renowned artist V. M. Solapurkar was appointed as Dean on contract basis for five year.

ಶ್ರೀ ಹೆಚ್. ಗಂಗಾಧರನ್.—ಮೊದಲಿನಿಂದ ಕಲಾಶಾಲೆ ಇತ್ತು. ಅದೇ ಸ್ಟಾಫ್‌ನ ಕೆಲವರು ವರ್ಕ್ ಮಾಡುತ್ತಾ ಇದ್ದಾರೆ. ಅದೇ ಕ್ವಾಲಿಫಿಕೇಷನ್ ಇದ್ದವರಿಗೆ ಹೈಸ್ಕೂಲಿನ ಸ್ಕೇಲಿರಿಯನ್ನು ಕೊಡುತ್ತಿದ್ದೀರಿ. ಅದೇ ಕ್ವಾಲಿಫಿಕೇಷನ್ ಇದ್ದು ಹೊರಗಡೆಯಿಂದ ಬಂದಿರುವವರಿಗೆ ಹೆಚ್ಚುವರಿ ಗ್ರೇಡ್ ಕೊಟ್ಟಿದ್ದೀರಿ. ಈ ರೀತಿ ವ್ಯತ್ಯಾಸ ಇದೆ. ಈಗ ವರ್ಷ ಕೆಲಸಮಾಡಿದವರಿಗೆ ಕಡಿಮೆ ವೇತನ ಹೊಸದಾಗಿ ತರೆದುಕೊಂಡು ಬಂದವರಿಗೆ ಜಾಸ್ತಿ ವೇತನ ಇದೆ. ಆದುದರಿಂದ ಈ ಒಂದು ತಾರತಮ್ಯವನ್ನು ನಿವಾರಣೆಮಾಡಿ ಹೊಸ ರೂಪ ಕೊಡುವುದಕ್ಕೆ ಪ್ರಯತ್ನವಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಇದನ್ನು ಪರಿಶೀಲಿಸಬೇಕಾಗಿದೆ ಸ್ವಾಮಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಚಿತ್ರಾಂರಾಜೇಂದ್ರ ಕಲಾಶಾಲೆಯಲ್ಲಿ ಸೋಲಾಪುರ್‌ಕರ್ ಅವರನ್ನು ಡೀನಾಗಿ ನೇಮಕಮಾಡಿ ಎಷ್ಟು ದಿನ ಆಯಿತು ? ಎರಡು ವರ್ಷಗಳು ಆಗಿರಬಹುದು. ಅಕಾಡೆಮಿಕ್ ಇಯರ್‌ನಲ್ಲಿ ಕೋರ್ಸನ್ ಪ್ರಾರಂಭಮಾಡಬೇಕೆಂದು ಇವೆ ಏನ್ನುವುದು ನಾನು ತಿಳಿದುಕೊಂಡಂಥ ವಿಚಾರ. ಈ ಶಾಲೆಯನ್ನು ಅಫಿಲಿಯೇಷನ್ ಮಾಡಲಿಕ್ಕೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬರೆದಿದ್ದೀರಾ ಅಥವಾ ಕಲಾಶಾಲೆಯವರು ಬರೆದಿದ್ದಾರೆಯೇ. ಮತ್ತೇ ಎರಡನೆಯದಾಗಿ, ಗವರ್ನಿಂಗ್

ಕೌನ್ಸಿಲ್ ನೇಮಕವಾದಮೇಲೆ ಈ ಒಂದು ವರ್ಷದಲ್ಲಿ ಎಷ್ಟು ಸಭೆಗಳನ್ನು ಕರೆದಿದ್ದಾರೆ ? ಮೂರನೆಯ ಪ್ರಶ್ನೆ ಏನೆಂದರೆ, ಆ ಕಲಾಶಾಲೆಯಲ್ಲಿ ಬಹಳ ಪರಂಪರಾನುಗತವಾಗಿ ಬಂದಂಥ ಕೋರ್ಸ್‌ಗಳನ್ನು ಸಂಪೂರ್ಣವಾಗಿ ಕೈಬಿಟ್ಟು ಹೊಸದಾಗಿ ಕೋರ್ಸ್‌ಗಳನ್ನು ತೆಗೆದುಕೊಳ್ಳತಕ್ಕ ಪ್ರವೃತ್ತಿ ಮಾಡಿದ್ದೀರಿ. ಇದಕ್ಕೆ ಏನು ಕಾರಣ ?

ಶ್ರೀ ಬಿ. ರಾಚಯ್ಯ.—ಆವರು ಈಗಾಗಲೇ ಒಂದು ವಿಸಿಟಿಂಗ್ ಕರೆದಿದ್ದಾರೆ. ಆ ವಿಸಿಟಿಂಗ್‌ನಲ್ಲಿ ಒಂದು ಮಾಸ್ಟರ್‌ಪ್ಲಾನ್ ತಯಾರುಮಾಡಿ ಅದಕ್ಕೆ ಅಪ್ರೂವಲ್ ಕೊಟ್ಟಿದ್ದಾರೆ. ಇದರ ಜೊತೆಯಲ್ಲಿ ಕೋರ್ಸ್‌ನ್ನು ಮುಂದುವರಿಸಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದಾರೆ. The courses are : 'A' Department of Fine Arts ; Portraits drawing and painting ; sculpture ; modelling, graphics ; history of art, aesthetics and criticism ; 'B' Department of Arts and crafts : Exteior design ; interior design, ceramics ; 'C' Department of visual communication: applied art, photography, photo journalism, film making, music and design.

ಶ್ರೀ ಎಂ. ವೀರಪ್ಪ ಮೊಯಿಲಿ.—ಯೂನಿವರ್ಸಿಟಿ ಅಫಿಲಿಯೇಷನ್‌ಗೆ ಏನಾದರೂ ಕೇಳಿದ್ದೀರಾ; ಕೇಳಿದ್ದರೆ ಅದಕ್ಕೆ ಯೂನಿವರ್ಸಿಟಿ ಸ್ಟೇಟಸ್ ಕೊಡತಕ್ಕ ಆಲೋಚನೆ ಏನಾದರೂ ತಮ್ಮಲ್ಲಿದೆಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮತ್ತೊಂದು ವಿಚಾರ ಕರ್ನಾಟಕ ರಾಜ್ಯದಲ್ಲಿ ಪ್ರಧಾನವಾಗಿರತಕ್ಕಂತಹ ಸ್ಯಾಂಡಲ್ ಉಡ್ ಕೆಲಸ, ಬೆದರಿ ವರ್ಕ್, ಇಂತಹ ಕೆಲಸಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ, ಕಲಾ ಶಾಲೆಯಲ್ಲಿ ಅಳವಡಿಸಿ, ಇದನ್ನು ವೃದ್ಧಿಪಡಿಸುವುದಕ್ಕೆ ಆಲೋಚನೆ ಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ಮಾನ್ಯ ವಿರೋಧಪಕ್ಷದ ನಾಯಕರು ಕೊಟ್ಟಂತಹ ಸಲಹೆಯನ್ನು ಕಲಾ ಶಾಲೆಯ ಅಕೆಡಮಿಕ್ ಕೌನ್ಸಿಲ್‌ನ ಮುಂದೆ ಇಡುತ್ತೇನೆ.

ಶ್ರೀ ಎಚ್. ಗಂಗಾಧರನ್.—ಮೈಸೂರಿನಲ್ಲಿ ಈಗ ಹಾಲಿ ಇರತಕ್ಕಂತಹ ಕಲಾ ಶಾಲೆಯು ಕಟ್ಟಡವನ್ನು ಕೈಗಾರಿಕೆ ಇಲಾಖೆಯವರು ಇಟ್ಟುಕೊಂಡಿದ್ದಾರೆ. ಆ ಕಟ್ಟಡದಲ್ಲಿ ಕಲಾಶಾಲೆಯ ಶಾಲೆಗಳನ್ನು ನಡೆಸುವುದಕ್ಕೆ ಅವಕಾಶ ವಾಗುವುದಿಲ್ಲ. ಇಲ್ಲದಿದ್ದರೆ ಕೈಗಾರಿಕಾ ಇಲಾಖೆಗೆ ಅದನ್ನು ಪೂರ್ತಿ ಬಿಟ್ಟು ಕೊಟ್ಟು, ಇವರಿಗೆ ಅರಮನೆಯನ್ನಾದರೂ ಕೊಡಿ. ಇಲ್ಲ, ಇವರಿಗೆ ಆ ಕಟ್ಟಡವನ್ನು ಬಿಡಿಸಿಕೊಟ್ಟು, ಕೈಗಾರಿಕಾ ಇಲಾಖೆಯವರಿಗೆ ಬೇರೆ ವ್ಯವಸ್ಥೆಯನ್ನಾದರೂ ಮಾಡಿ, ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಈಗ ಇರತಕ್ಕಂತಹ ಕಟ್ಟಡದಲ್ಲಿ ಆ ಶಾಲೆಯ ಶಾಲೆಗಳನ್ನು ನಡೆಸಿದ್ದಕ್ಕೂ ಹಾಗೂ ಅವರ ಕಾರ್ಯಾಗಾರವನ್ನು ಇಟ್ಟುಕೊಳ್ಳುವುದಕ್ಕೆ ಸ್ಥಳಾವಕಾಶ ಇಲ್ಲದೆ ತೊಂದರೆಯಾಗಿರತಕ್ಕಂತಹದ್ದು ನಮ್ಮ ಗಮನಕ್ಕೂ ಬಂದಿದೆ. ನಾವು ಆ ಕಟ್ಟಡವನ್ನು ಬಿಟ್ಟುಕೊಡಬೇಕೆಂದು ನಮ್ಮ ಇಲಾಖೆ ಹಾಗೂ ಕೈಗಾರಿಕಾ ಇಲಾಖೆಯವರೊಡನೆ ಚರ್ಚೆ ನಡೆಯುತ್ತಿದೆ. ನಿಮಗೆ ಬೇರೆ ಸ್ಥಳಾವಕಾಶವನ್ನು ಮಾಡಿಕೊಡಲಾಗುವುದು ನಮಗೆ ಈ ಕಟ್ಟಡವನ್ನು ಬಿಟ್ಟುಕೊಡಿ ಎಂಬುದಾಗಿ ಕೇಳುತ್ತಿದ್ದೇವೆ.

ಸಾತನೂರು ವಿಧಾನಸಭಾ ಕ್ಷೇತ್ರದಲ್ಲಿರುವ ಪಂಚಾಯಿತಿ ಕಟ್ಟಡಗಳ ರಿಪೇರಿಯ ಬಗ್ಗೆ

೧೨೮. ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ (ಸಾತನೂರು).—ಸನ್ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ ;

ಅ) ಸಾತನೂರು ವಿಧಾನ ಸಭಾ ಕ್ಷೇತ್ರದಲ್ಲಿರುವ ಪಂಚಾಯಿತಿಗಳ ಸಂಖ್ಯೆ ಎಷ್ಟು ?

ಆ) ಪಂಚಾಯಿತಿ ಇರುವ ಕಡೆಗಳಲ್ಲಿ ಎಷ್ಟು ಪಂಚಾಯಿತಿ ಕಟ್ಟಡಗಳಿವೆ, ಅವುಗಳಲ್ಲಿ ಎಷ್ಟು ಉಪಯೋಗಕ್ಕೆ ಬರುತ್ತಿವೆ ;

ಇ) ಉಪಯೋಗಕ್ಕೆ ಬರದೆ ಇರುವ ಕಟ್ಟಡಗಳನ್ನು ದುರಸ್ತಿಮಾಡಲು ಸರ್ಕಾರ ಕೈಕೊಂಡ ಕ್ರಮವೇನು ;